# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 238/2018**

| | | |
|---|---|---|
| ಸಾಕ್ಷಿದಾರರ ಹೆಸರು | : ಶೋಭಾ | ಪಿಡಬ್ಲ್ಯೂ : 5 |
| ತಂದೆಯ / ಗಂಡನ ಹೆಸರು | : ಲೇಟ್ ಮಂಜುನಾಥ್ | ಸಿಡಬ್ಲ್ಯೂ : 6 |
| ವಯಸ್ಸು | : 48 ವರ್ಷ | |
| ಉದ್ಯೋಗ | : ಕೂಲಿ ಕೆಲಸ | |
| ವಾಸಸ್ಥಳ | : ಶಿವಮೊಗ್ಗ | |

**ಸಾಕ್ಷಿಯನ್ನು ಈ ದಿನ ದಿಃ 03.07.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

1. ನನಗೆ ಒಟ್ಟು 3 ಜನ ಮಕ್ಕಳು. ಒಂದು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳು. ಮಕ್ಕಳ ಹೆಸರು ಅನ್ನಪೂರ್ಣ , ರಮೇಶ ಮತ್ತು ಆಶಾ ಎಂದು.

2. ಆಶಾ ಗೆ ಉಮಾಪತಿ ಭಟ್ ಜೊತೆಯಲ್ಲಿ ಮದುವೆಯಾಗಿತ್ತು. ಉಮಾಪತಿ ಭಟ್ ರವರ ಪರಿಚಯಸ್ತರಾದ ಮಂಜುನಾಥ ಭಟ್ ಎನ್ನುವವರು ಶಿವಮೊಗ್ಗದಲ್ಲಿ ಇದ್ದರು. ನಾನು ಅವರ ಮನೇಗೆ ಹೋಗಿ ಬರುತ್ತಿದ್ದೆ. ಈಗಾಗಿ ಚಾಸಾ.1 ಮಂಜುನಾಥ ಭಟ್ ರವರ ಮೂಲಕ ನನ್ನ ಮಗಳು ಆಶಾ ಳನ್ನು ಮದುವೆಯಾಗುತ್ತೇನೆ ಎಂದು ಹೇಳಿಸಿದರು. ನಾವು ಬೇಡ ಎಂದಿದ್ದೆವು. ಆದರೆ ಚಾಸಾ.1 ಬಲವಂತ ಮಾಡಿದ್ದರು. ಮೈಸೂರಿಗೆ ಚಾಸಾ.1 ರವರ ಮನೆಯನ್ನು ನೋಡೇಲು ಬಂದೆವು. ಆದರೆ ಆಗಲೇ ಅವರು ನಿಶ್ಚಿತಾರ್ಥ ವನ್ನು ಸಹ ಮಾಡಿಕೊಂಡು ಬಿಟ್ಟರು. ಚಾಸಾ.1 ರವರ ಮೊದಲನೇ ಮದುವೆ ನನ್ನ ಮಗಳೊಂದಿಗೆ

ಆಗಿತ್ತು. ಈಗ್ಗೆ 10 ವರ್ಷಗಳ ಹಿಂದೆ ಚಾಸಾ.1 ರವರು ನನ್ನ ಮಗಳು ಆಶಾ ಳನ್ನು ಮೈಸೂರಿನಲ್ಲೇ ಮದುವೆ ಮಾಡಿಕೊಂಡರು. ನನಗೆ ಆ ಛತ್ರದ ಹೆಸರು ನೆನಪಿಲ್ಲ. ಮರೆತುಹೋಗಿದೆ.

3. ನಾನು ಬಡವರಾಗಿದ್ದೆವು. ನಮ್ಮ ಮಗಳು ಇನ್ನೂ ಎರಡನೇ ಪಿಯುಸಿ ಓದುತ್ತಿದ್ದಳು. ನನಗೆ ಮದುವೆ ಮಾಡಲು ಹಣವಿರಲಿಲ್ಲ. ಈಗಾಗಿ ಮೊದಲು ಈ ಸಂಬಂದಕ್ಕೆ ನಾವು ಒಪ್ಪಿರಲಿಲ್ಲ. ಆದರೆ ಚಾಸಾ.1 ರವರು , ನಿಮ್ಮ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂದ ಬಹಳ ಬಲವಂತ ಮಾಡಿದ್ದರಿಂದ ನಾನು ಮದುವೆಗೆ ಒಪ್ಪಿದೆ.

4. ಮದುವೆಯಾದ ನಂತರ ನನ್ನ ಮಗಳು ಚಾಸಾ.1ರ ವರವರೊಂದಿಗೆ ಮೈಸೂರಿನ ನಂಜುಮಳಿಗೆಯಲ್ಲಿ ಸಂಸಾರ ಪ್ರಾರಂಭಿಸಿದಳು. 3 ವರ್ಷಗಳ ನಂತರ ಚಾಸಾ.1 ಒಂದು ಮನೆಯನ್ನು ಜೆ ಪಿ ನಗರದಲ್ಲಿ ಕೊಂಡುಕೊಂಡರು. ನಂತರ ಅಲ್ಲಿಗೆ ಹೋಗಿ ಅವರು ನೆಲೆಸಿದರು. ನಂಜುಮಳಿಗೆಯಲ್ಲಿ ಇದ್ದಾಗಲೇ ಅವರಿಬ್ಬರಿಗೆ ಒಂದು ಹೆಣ್ಣು ಮಗು ಆಗಿತ್ತು. ನಾನೇ ಇಲ್ಲಿಗೆ ಬಂದು ಬಾಣಂತನ ವನ್ನು ಮಾಡಿದ್ದೆ. ಎರಡು ತಿಂಗಳಾದ ನಂತರ ನಮ್ಮ ಊರಿಗೆ ಸ್ವಲ್ಪ ದಿನಗಳ ಕಾಲ ಬಾಣಂತನಕ್ಕಾಗಿ ಕರೆದುಕೊಂಡು ಹೋಗಿದ್ದೆ.

5. ಜೆ ಪಿ ನಗರಕ್ಕೆ ಹೋದ ನಂತರ ಗಂಡ ಹೆಂಡತಿ ನಡುವೆ ಸ್ವಲ್ಪ ತಿಕ್ಕಾಟ ವಿತ್ತು. ನಮ್ಮ ಮಗಳು ಮನೆಗೆ ಬಂದಾಗ ಹೇಳಿಕೊಳ್ಳುತ್ತಿದ್ದಳು ಹಾಗೂ ತನ್ನ ಗಂಡನಿಗೆ ಬೇರೆಯವರ ಜೊತೆ ಸಂಬಂಧ ಇದೆ ಎಂದು ನೋಡಿದವರು ನನಗೆ ಹೇಳಿರುತ್ತಾರೆ ಎಂದು ನಮ್ಮಲ್ಲಿ ಹೇಳಿದ್ದಳು. ನಂತರ ನಾನು ನನ್ನ ಅಳಿಯ ಚಾಸಾ.1 ರವರನ್ನು ಶಿವಮೊಗ್ಗ ಕರೆಸಿ , ಒಂದಿಬ್ಬರನ್ನು ಸೇರಿಸಿ , ಈ ರೀತಿಯೆಲ್ಲಾ ಬೇಡ , ಚೆನ್ನಾಗಿ ಇರಿ ಎಂದು ಹೇಳಿ ಕಳುಹಿಸಿದ್ದೆ.

6. ನಾವು ದಾವಣಗೆರೆಗೆ ಹೋಗಿದ್ದೆವು. ಈಗ್ಗೆ 5 ವರ್ಷ ಗಳ ಹಿಂದೆ ಚಾಸಾ.1 ನನ್ನ ದೊಡ್ಡ ಮಗಳು ಅನ್ನಪೂರ್ಣಳಿಗೆ ಫೋನ್ ಮಾಡಿ ಆಶಾಳಿಗೆ ಹುಷಾರಿಲ್ಲ , ಸಿರಿಯಸ್ ಆಗಿದೆ , ಬನ್ನಿ ಎಂದು ಹೇಳಿದರಂತೆ. ಬಿ.ಪಿ. ಲೋ ಆಗಿದೆ , ಹೀಗಾಗಿ ಆಸ್ಪತ್ರೆ ಗೆ ಸೇರಿಸಿದ್ದೇನೆ ಎಂದು ಹೇಳಿದರಂತೆ. ಆಗ ನಾನು ಮತ್ತು ನನ್ನ ಮಗ ದಾವಣಗೆರೆಯಿಂದ ಮೈಸೂರಿಗೆ ಬಂದೆವು. ನನ್ನ ಮಗಳು ಅನ್ನಪೂರ್ಣ ಕುಂದಾಪುರದಿಂದ ಮೈಸೂರಿಗೆ ಬಂದಳು. ನಾವು ಮೈಸೂರು ತಲುಪಿದಾಗ ಸಂಜೆ ಆಗಿತ್ತು. ಮೊದಲು ವಿದ್ಯಾರ್ಣ ಆಸ್ಪತ್ರೆಗೆ ಹೋದೆವು. ಅಲ್ಲಿ ನನ್ನ ಮಗಳ ಶವ ಇರಲಿಲ್ಲ. ನಂತರ ಇನ್ನೊಂದು ಆಸ್ಪತ್ರೆಗೆ ಹೋದೆವು. ಅಲ್ಲಿ ನನ್ನ ಮಗಳನ್ನು ಐಸಿಯು ನಲ್ಲಿ ಇಟ್ಟಿದ್ದರು. ನಮಗೆ ತೋರಿಸಲಿಲ್ಲ. ನಂತರ ನಮ್ಮನ್ನು ಚಾಸಾ.1 ಯಾವುದೋ ತೋಟದ ಮನೆಗೆ ಕರೆದುಕೊಂಡು ಹೋದರು. ಆಗ ರಾತ್ರಿಯಾಗಿತ್ತು. ನಂತರ ಮರುದಿನ ಬೆಳಿಗ್ಗೆ 08.00–08.30 ರ ಸಮಯಕ್ಕೆ ಶವವನ್ನು ಮನೆಗೆ ತರದೇ ಯಾವ ಸಂಸ್ಕಾರ ವನ್ನು ಮಾಡದೇ, ನೇರವಾಗಿ ಸ್ಮಶಾನಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಸುಟ್ಟರು.

7. ಚಾಸಾ.1 ರವರಲ್ಲಿ ನನ್ನ ಮಗಳ ವೈದ್ಯಕೀಯ ವರದಿಯನ್ನು ಆಸ್ಪತ್ರೆಯಿಂದ ಕೊಡಿಸುವಂತೆ ಕೇಳಿದೆವು. ಆದರೆ ಆತ , ಆಕೆಗೆ ಲೋ ಬಿ.ಪಿ ಯಾಗಿತ್ತು ಎಂದು ಹೇಳಿದನು. ಆತನೊಂದಿಗೆ ಇನ್ನು ಮೂವರು ಇದ್ದರು. ಅವರುಗಳು ನಮಗೆ ಮಾತನಾಡಲು ಬಿಡಲೇ ಇಲ್ಲ.

8. ಮಗು ತನ್ನ ಅಪ್ಪನೊಂದಿಗೆ ಇರುವುದಿಲ್ಲ ಎಂದು ಹೇಳಿತು. ಹೀಗಾಗಿ ನಾನವು ಅದನ್ನು ಶಿವಮೊಗ್ಗಕ್ಕೆ ಕರೆದುಕೊಂಡು ಹೋದೆವು. 11 ನೇ ದಿನದ ಕಾರ್ಯಕ್ಕೆ ನಾವು ಮಗುವನ್ನು ಕರೆದುಕೊಂಡು ಮೈಸೂರಿನ ಮನೆಗೆ ಬಂದೆವು. ನಂತರ ಅಲ್ಲಿಂದ ಪೊಲೀಸ್

ಠಾಣೆಗೆ ಹೋದೆವು. ಅಲ್ಲಿ ಪೊಲೀಸರ ಎದುರು ಚಾಸಾ.1, ನಾನೇ ತಂದೆಯಾಗಿರುವುದರಿಂದ ಮಗುವನ್ನು ನನ್ನ ವಶಕ್ಕೆ ಕೊಡಬೇಕು ಎಂದರು. ಆಗ ನಾನು , ಅದು ಹೆಣ್ಣು ಮಗು , ನಿಮ್ಮ ಮನೆಯಲ್ಲಿ ನೋಡಿಕೊಳ್ಳಲು ಯಾರು ಇಲ್ಲ , ಶಿವಮೊಗ್ಗಕ್ಕೆ ಬಂದು ನೋಡಿಕೊಂಡು ಹೋಗುತ್ತೀರಿ , ನಾನೇ ಸಾಕುತ್ತೇನೆ ಎಂದು ಹೇಳಿದೆ. ಆದರೆ ಅದಕ್ಕೆ ಆತ ಒಪ್ಪಲಿಲ್ಲ. ಸಬ್ ಇನ್ಸ್‌ಪೆಕ್ಟರ್ ರವರು ನನಗೆ, ನೀನು ಮಗುಳವನ್ನು ಕರೆದುಕೊಂಡು ಹೋದರೆ ನಿನ್ನ ಮೇಲೆ ಕೇಸ್ ನ್ನು ರಿಜಿಸ್ಟರ್ ಮಾಡಿಸುತ್ತೇನೆ ಎಂದು ಹೆದರಿಸಿದರು. ನೀವು ವಾರಕ್ಕೊಮ್ಮೆ ಮಗುವಿಗೆ ಪೋನ್ ಮಾಡಿ , ಆಗಾಗ್ಗೆ ಬಂದು ನೋಡಿಕೊಂಡು ಹೋಗಬಹುದು ಎಂದು ನಮ್ಮಿಂದ ಬರವಣಿಗೆ ಮಾಡಿಸಿಕೊಂಡರು. ಈಗ ಮಗುವಿನ್ನೊಂದಿಗೆ ಮಾತನಾಡಲು ಪೋನ್ ಮಾಡಿದರೆ ಆತ ರೀಸಿವ್ ಮಾಡುವುದಿಲ್ಲ ಮತ್ತು ಮಗುವನ್ನು ನೊಡೀಲು ಬಿಡುವುದಿಲ್ಲ. ಈಗ ಆತ ಇನ್ನೊಂದು ಮದುವೆಯಾಗಿದ್ದಾನೆ . ಆದ್ದರಿಂದ ಆ ಮಗುವಿಗೆ ಕಷ್ಟ .

9. ನಾವು ಮೈಸೂರಿನ ಪೋಲೀಸ್ ಠಾಣೇಗೆ ದೂರನ್ನು ಕೊಡಲೂ ಹೋದೆವು. ಆದರೆ ಅವರ ಆ ದೂರನ್ನು ಪಡೆದುಕೊಳ್ಳಲಿಲ್ಲ. ಚಾಸಾ.1 ಈಗಾಗಲೇ ದೂರನ್ನು ಕೊಟ್ಟಿರುವುದರಿಂದ , ಅದೇ ಸಾಕಾಗುತ್ತದೆ ಎಂದರು.

10. ಚಾಸಾ.1 ಯಾರ ವಿರುದ್ಧ ದೂರನ್ನು ಕೊಟ್ಟಿದ್ದಾರೆ ಎಂದು ನಮಗೆ ನಗೊತ್ತಿಲ್ಲ . ನಾವು ವಾಪಾಸ್ಸು ಊರಿಗೆ ಹೋದ ಒಂದು ವಾರದ ನಂತರ , ನನಗೆ ಅವಳು ಬರೆದ ಚೀಟಿ ಸಿಕ್ಕಿದೆ ಎಂದು ಹೇಳಿ ದೂರನ್ನು ನೀಡಿರುತ್ತಾನೆ. ಆ ಚೀಟಿಯ ಬಗ್ಗೆ ನಮಗೆ ಗೊತ್ತಿಲ್ಲ. ನಮಗೆ ತೋರಿಸಿಲ್ಲ. ಮೊಬೈಲ್ ನ ಮೆಸೇಜ್ ಗಳ ಬಗ್ಗೆ ನಮಗೆ ಗೊತ್ತಿಲ್ಲ , ತೋರಿಸಿಲ್ಲ.

11. ಪೊಲಿಸೀರ ಮುಂದೆ ನನ್ನ ಹೇಳಿಕೆಯನ್ನು ನೀಡಿದ್ದೇನೆ. ಪೊಲೀಸರಿಂದ ನಮಗೆ ಯಾವ ನ್ಯಾಯವೂ ಸಿಗಲಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

<u>ಪಾಟೀ ಸವಾಲು ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

12. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ , " ನಂತರ ನನ್ನ ಅಳಿಯ ಮನೆಯನ್ನು ಕ್ಲೀನ್ ಮಾಡುವಾಗ ನನ್ನ ಮಗಳು ಬರೆದಿದ್ದ ಡೆತ್ ನೋಟ್ ಸಿಕ್ಕಿದ್ದ ವಿಚಾರವನ್ನು ತಿಳಿಸಿದರು. ನಂತರ ನಾನು ಮತ್ತು ನನ್ನ ಮಗ ಹಾಗೂ ಮೊದಲನೇ ಮಗಳು ಮೈಸೂರಿಗೆ ಬಂದು ನನ್ನ ಅಳಿಯ ತೋರಿಸಿದ ಡೆತ್ ನೋಟ್ ನ್ನು ನೋಡಿ ಓದಿಸಿ ಕೇಳಿ ತಿಳಿದುಕೊಂಡಿರುತ್ತೇನೆ. ಈ ಡೆತ್ ನೋಟ್ ನ್ನು ನನ್ನ ಮಗಳು ಆಶಾ ಬರೆದಿದ್ದು , ಇದರಲ್ಲಿ ಗಣೇಶ ಅಲಿಯಾಸ್ ಗಣಪತಿ ಭಟ್ ನನ್ನ ಸಾವಿಗೆ ಕಾರಣ ಎಂದು ಬರೆದಿರುತ್ತಾಳೆ. ನಂತರ ನನ್ನ ಅಳಿಯ ವಿದ್ಯಾರ್ಣ್ಯಪುರನ ಪೊಲೀಸ್ ಸ್ಟೇಷನ್ ನಲ್ಲಿ ದೂರು ನೀಡಿರುತ್ತಾರೆ." ಎಂದು ಹೇಳಿಕೆ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ.8 ಎಂದು ಗುರುತುಪಡಿಸಿಕೊಳ್ಳಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಸಮಯ ಕೋರಿದ್ದರಿಂದ , ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**